ಸಿ.ಸಿ. ನಂಃ 1021/2021
ಪಿ.ಡಬ್ಲ್ಯೂಃ 1

ದಿನಾಂಕಃ 04-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್. ಸಿ. ಜಿ. ವಕೀಲರಿಂದಃ

2020 ರಲ್ಲಿ ಆರೋಪಿ ಬಸ್ಸಿನಲ್ಲಿ ನಿರ್ವಾಹಕನಾಗಿದ್ದ. ಪರಮೇಶಪ್ಪ ತಂದೆ ರಾಮನಗೌಡ ಗಂಗಮ್ಮನವರ ಯಾರೆಂದು ಗೊತ್ತಿರುವುದಿಲ್ಲ. ಪ್ರಿಯಾಂಕಾ ಕೋಂ ಶಿವರಾಜ ಬಣಕಾರ, ಶಿವರಾಜ ತಂದೆ ನಾಗರಾಜ ಬಣಕಾರ, ಭಾರತಿ ತಂದೆ ಈರಪ್ಪ ಬ್ಯಾಹಟ್ಟಿ ಶ್ರೀಮತಿ ಶಾಂತಾ ಆರ್. ಜಿ. ಇವರು ಪರಿಚಯ ಇರುತ್ತಾರೆ. 2021 ರಲ್ಲಿಯೂ ಆರೋಪಿ ಕೆ. ಎಸ್. ಆರ್. ಟಿ. ಸಿ. ಯಲ್ಲಿ ನೌಕರಿ ಮಾಡುತ್ತಿದ್ದ ಎನ್ನುವುದು ಗೊತ್ತಿರುವುದಿಲ್ಲ. ಭಾರತಿ ತಂದೆ ಈರಪ್ಪ ಬ್ಯಾಹಟ್ಟಿ ನನ್ನ ಹೆಂಡತಿ. ಸದರಿ ಭಾರತಿ ಹುಬ್ಬಳ್ಳಿಯವರು. ಈಗ ನನ್ನ ಜೊತೆಯಲ್ಲಿ ಇದ್ದು ಅವರು ಸಾಪ್ಟವೇರ್ ಇಂಜಿನಿಯರ್ ಇರುತ್ತಾರೆ. ಪರಮೇಶ ತಂದೆ ರಾಮನಗೌ ಗಂಗಮ್ಮನವರ 2020 ರಲ್ಲಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಶಿವರಾಜ ಬಣಕಾರ ಇವನು 2020 ರಲ್ಲಿ ಸೋಲಾರ ವ್ಯವಹಾರ ಮಾಡುತ್ತಿದ್ದ. ನಾವೆಲ್ಲರೂ ಸೇರಿ ಸಮೃದ್ಧಿ ಎಂಟರ್ ಪ್ರೈಸಸ್‌ನ್ನು ರಾಣೇಬೆನ್ನೂರಿನಲ್ಲಿ ಮಾಡಿದ್ದೇವು. 2018 ರಲ್ಲಿ ಮಾಡಿದ್ದೇವು, ಆದರೆ ತಾರೀಕು ತಿಂಗಳು ನೆನಪಿರುವುದಿಲ್ಲ. ಪರಮೇಶಪ್ಪ ತಂದೆ ರಾಮನಗೌ ಗಂಗಮ್ಮನವರ ಇವನು ಗೊಡಚಿಕೊಂಡ ಗ್ರಾಮದವನು. ನನ್ನದು ಗೊಡಚಿಕೊಂಡ. ಸದರಿ ಪರಮೇಶಪ್ಪ ಹಾಗೂ ನಾವು ಸಂಬಂಧಿಕರು ಎನ್ನುವುದು ನಿಜ. ಶಿವರಾಜ ಚೆನ್ನಳ್ಳಿ ಗ್ರಾಮದವನು. ಶಿವರಾಜ 2018 ರ ಮೊದಲಿನಿಂದಲೂ ಸೋಲಾರ ವ್ಯವಹಾರ ಮಾಡುತ್ತಾ ಬಂದಿದ್ದ ಎನ್ನುವುದು ನಿಜ. ಸದರಿ ಶಿವರಾಜನ ತಮ್ಮ ಆರೋಪಿ ಎನ್ನುವುದು ನಿಜ. ನಾನು 9886811569 ನೇದ್ದರ ಮೂಲಕ ವ್ಯವಹಾರ ಮಾಡುತ್ತಿದ್ದೆ. 2018 ರಿಂದ ಇದೂವರೆಗೂ ಅದೇ ನಂಬರಿನಿಂದ ವ್ಯವಹಾರ ಮಾಡುತ್ತಿದ್ದೇ ಎನ್ನುವುದು ನಿಜ. ಶಿವರಾಜ ಸೋಲಾರ ಸೋಲಾರ ವ್ಯವಹಾರ ಮಾಡುತ್ತಿದ್ದ ಕುರಿತು ಆರ್ಥಿಕವಾಗಿ ಬಲಿಷ್ಟನಾಗಿರುತ್ತಾನೆ ಎನ್ನುವುದು ನಿಜ. ಇಂದಿಗೂ ಬೆಂಗಳೂರಿನಲ್ಲಿ ಕೋಟಿಗಟ್ಟಲೇ ವ್ಯವಹಾರಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಸೋಲಾರ ವ್ಯವಹಾರವನ್ನು ಹಿರೇಕೆರೂರಿನಲ್ಲಿ ಶಿವರಾಜ ಮಾಡುತ್ತಿದ್ದ ಎನ್ನುವುದು ನಿಜ. ಸದರಿ ಪರಮೇಶಪ್ಪ 2018 ರ ಪೂರ್ವದಲ್ಲಿ ಜೀಯೋ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಸಮೃದ್ಧಿ ಎಂಟರ್ ಪ್ರೈಸಸ್ ನ್ನು 3 ಹೆಣ್ಣು ಮಕ್ಕಳು ಹಾಗೂ 3 ಜನ ಗಂಡು ಮಕ್ಕಳು ಸೇರಿ ಪ್ರಾರಂಭ ಮಾಡಿದ್ದೇವು ಎನ್ನುವುದು ನಿಜ. 25,00,000/- ರೂ.ಗಳ ಹಣವನ್ನು ತೊಡಗಿಸಿ ಸದರಿ ವ್ಯವಹಾರವನ್ನು ಪ್ರಾರಂಭಿಸಿದ್ದೇವು. ಆ ಕುರಿತು ದಾಖಲೆ ಇರುವುದಿಲ್ಲ. 1 ವರ್ಷ ಮಾತ್ರ ಮಾಡಿರುತ್ತೇವೆ. ಸದರಿ ವ್ಯವಹಾರ ಈಗ ಇರುವುದಿಲ್ಲ. ಅದನ್ನು ನೋಂದಣಿ ಮಾಡಿಸಿದ್ದೇವು.

ಸದರಿ ಕಂಪನಿಯನ್ನು ಕಾನೂನು ಪ್ರಕಾರವಾಗಿ ಮುಕ್ತಾಯ ಮಾಡಿರುವುದಿಲ್ಲ, ಈಗಲೂ ಆ ಕಂಪನಿ ಇರುವುದಿಲ್ಲ. ಸದರಿ ವ್ಯವಹಾರವನ್ನು ಪರಮೇಶಪ್ಪನ ತಂದೆ ನೋಡಿಕೊಳ್ಳುತ್ತಿದ್ದ, ಪರಮೇಶಪ್ಪನು ಪ್ರತಿದಿನ ಬರುತ್ತಿದ್ದ. ಸದರಿ ವ್ಯವಹಾರವನ್ನು ನೋಡಿಕೊಳ್ಳಲು ಆಗದ ಕಾರಣ ಅದನ್ನು ಮುಕ್ತಾಯ ಮಾಡಿರುತ್ತೇವೆ. ಸದರಿ ವ್ಯವಹಾರ ಕೊರೋನ ಬಂದಿದ್ದರಿಂದ ನಷ್ಟ ಆಗಿರುತ್ತದೆ ಎನ್ನುವುದು ನಿಜ. 3 ಜನ ಪಾಲುದಾರರಿಗೆ ನಷ್ಟವಾಗಿತ್ತು ಎನ್ನುವುದು ನಿಜ. 2020 ಏಪ್ರಲ್ ತಿಂಗಳಿನಲ್ಲಿ ನಾವು ಪಾಲುದಾರರು ಕುಳಿತುಕೊಂಡು ಸದರಿ ವ್ಯವಹಾರವನ್ನು ಬಗೆಹರಿಸಿಕೊಂಡಿರುತ್ತೇವೆ. ಅಂದಿನಿಂದ ಇವತ್ತಿನವರೆಗೂ ನಮ್ಮ ಹಾಗೂ ಶಿವರಾಜನ ಮಧ್ಯ ವ್ಯವಹಾರ ಇರುವುದಿಲ್ಲ. ಸದರಿ ವ್ಯವಹಾರ ಬಗೆಹರಿಸಿಕೊಂಡ ನಂತರ ಶಿವರಾಜ ಹಾಗೂ ಆರೋಪಿಗೆ ಗೊತ್ತಿಲ್ಲದಂತೆ ಹುಬ್ಬಳ್ಳಿಯಲ್ಲಿ ವ್ಯವಹಾರವನ್ನು ಮುಂದುವರೆಸಲು ಪ್ರಯತ್ನ ಮಾಡಿದೆ ಎಂದರೆ ಸರಿಯಲ್ಲ. ಸದರಿ ವ್ಯವಹಾರವನ್ನು ಈರಪ್ಪ ಬ್ಯಾಹಟ್ಟಿ ಇವರ ಮುೂಲಕ ಪ್ರಾರಂಭ ಮಾಡಲು ಪ್ರಯತ್ನಿಸಿದೇವು ಎಂದರೆ ಸರಿಯಲ್ಲ. ಕೊರೋನಾ ಬಂದಾಗ ಮನೆಯಲ್ಲಿ ಕುಳಿತು ನಾನು ಕೆಲಸ ಮಾಡುತ್ತಿದ್ದೆ. ನಾನು ಹುಬ್ಬಳ್ಳಿಯ ಮನೆಯಲ್ಲಿ ಇದ್ದು, ಕೆಲಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2021 ಪೂರ್ಣ ವರ್ಷ ಮನೆಯಲ್ಲಿ ಕುಳಿತು ಕೆಲಸ ಮಾಡಿರುತ್ತೇನೆ. ಆರೋಪಿ ನನ್ನೊಂದಿಗೆ ಕೈಗಡ ಸಾಲವಾಗಿ ಪಡೆದು ಮರಳಿ ಕೊಡುತ್ತಾ ಬಂದಿರುವುದಕ್ಕೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಆ ರೀತಿ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಬಳಿ ಇರಲಿಲ್ಲ ಎಂದು ಹೇಳುತ್ತಾರೆ. ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇವು. ಆದಾಯ ತೆರಿಗೆ ಪಾವತಿ ಮಾಡಿರುವ ದಾಖಲೆಯನ್ನು ಹಾಜರು ಪಡಿಸಿಲ್ಲ. ಆರೋಪಿ ತನ್ನ ವೃತ್ತಿಯನ್ನು ಬಿಟ್ಟು ತನ್ನ ಸಹೋದರ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಎನ್ನುವುದು ಗೊತ್ತಿರುವುದಿಲ್ಲ. ಆರೋಪಿ ದಿಃ 15-12-2020 ರಂದು ತನ್ನ ಗೃಹ ಕೃತ್ಯದ ಅಡಚಣೆಯ ಸಲುವಾಗಿ ನನ್ನಿಂದ 5,00,000/- ರೂ.ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 500/- ಮುಖ ಬೆಲೆಯ 1000 ನೋಟುಗಳನ್ನು ನಗದಾಗಿ ಕೊಟ್ಟಿರುತ್ತೇನೆ. ಸದರಿ ಹಣ ಶುಂಠಿಯಿಂದ ಬಂದ ಹಣ ಮತ್ತು ನನ್ನ ಖಾತೆಯಿಂದ ತೆಗೆದಂತಹ ಹಣ ಇರುತ್ತದೆ. ನನ್ನ ಸಹೋದರನಿಂದ 3,00,000/- ರೂ.ಗಳನ್ನು ತೆಗೆದುಕೊಂಡಿರುತ್ತೇನೆ ಹಾಗೂ ನಾನು 2,00,000/- ರೂ.ಗಳನ್ನು ಹಾಕಿರುತ್ತೇನೆ. 2,00,000/- ರೂ.ಗಳನ್ನು ನಾನು ನನ್ನ ಖಾತೆಯಿಂದ ತೆಗೆದುಕೊಂಡಿದ್ದ ಕುರಿತು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಶುಂಠಿಯಿಂದ ನಮ್ಮ ಸಹೋದರಿನಿಗೆ 3,00,000/- ರೂ. ಹಣ ಬಂದಿದ್ದ ಕುರಿತು ದಾಖಲೆಯನ್ನು ಹಾಜರು ಪಡಿಸಿಲ್ಲ. ಶುಂಠಿಯನ್ನು ಮಾರಾಟ ಮಾಡಿದಾಗ ರಶೀದಿಯನ್ನು ಕೊಡುತ್ತಾರೆ ಎನ್ನುವುದು ನಿಜ.

ನಮ್ಮ ಸಹೋದರ ನನಗೆ 3,00,000/- ರೂ. ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿಃ 15-12-2020 ರಂದು ನಾನು 2,00,000/- ರೂ.ಗಳನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-12-2020 ರಂದು ನಾನು ಆರೋಪಿಗೆ ಕರೆ ಮಾಡಿ ಹಣ ಕೊಟ್ಟಿರುತ್ತೇನೆ.

*ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.*

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 04-08-2023

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು